ದಿನಾಂಕಃ 01.03.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಕೆ.ಡಿ., ವಕೀಲರಿಂದಃ**

ನಾನು ನನ್ನ ಮೊಬೈಲ್ ಸಂಖ್ ಗೆ ಹೊಸ ಸಿಮ್ ಕಾರ್ಡ್ ಪಡೆಯುವಾಗ ಹಳೆಯ ಸಿಮ್ ಕಳೆದು ಹೋಗಿದೆ ಎಂದು ಬರವಣಿಗೆಯಲ್ಲಿ ಪತ್ರ ಕೊಟ್ಟಿರುತ್ತೇನೆ. ಸದರಿ ಪತ್ರದ ನಕಲನ್ನು ಪೊಲೀಸರಿಗೆ ಕೊಟ್ಟಿಲ್ಲ. ಆ ರೀತಿ ಪತ್ರವನ್ನು ಮೊಬೈಲ್ ಅಂಗಡಿಗೆ ಕೊಟ್ಟಿದ್ದೇನೆ. ಮೊಬೈಲ್ ಮತ್ತು ಸಿಮ್ ಕಾರ್ಡ್ ಕಳೆದು ಹೋದರೆ ಪೊಲೀಸರಿಗೆ ದೂರು ನೀಡಬೇಕು ಅಂದರೆ ಸಾಕ್ಷಿಯು ಪೊಲೀಸರಿಗೆ ತಿಳಿಸಿರುವುದಾಗಿ ನುಡಿಯುತ್ತಾರೆ. ನಿಪಿ-1 ರೊಂದಿಗೆ ಯಾವುದೇ ಪ್ರಮಾಣ ಪತ್ರ ಕೊಟ್ಟಿಲ್ಲ ಅಂದರೆ ಸರಿ. ನಾನು ಬಣಕಲ್‌ನ ಮೊಬೈಲ್ ಅಂಗಡಿಯಲ್ಲಿ ಸಿಮ್ ಪಡೆದುಕೊಂಡಿದ್ದೇನೆ. ಸದರಿ ಅಂಗಡಿಯ ಹೆಸರು ಹೇಳಲಾಗುವುದಿಲ್ಲ. ನನ್ನ ಮೊಬೈಲ್ ನೊಂದಿಗೆ ಮೆಮೋರಿ ಕಾರ್ಡ್ ಇತ್ತು. ಆರೋಪಿ ಕಿತ್ತುಕೊಂಡು ಹೋಗಿದ್ದಾರೆ ಎಂದು ಹೇಳಲಾದ ಮೊಬೈಲ್ ಯಾವ ಅಂಗಡಿಯಿಂದ ಖರೀದಿ ಮಾಡಿದ್ದು ಎಂದು ಹೇಳಲಾಗುವುದಿಲ್ಲ. ಆ ಮೊಬೈಲ್ ನೋಕಿಯಾ ಕಂಪೆನಿಯ ಯಾವ ಮಾಡೆಲ್ ಎಂದು ನನಗೆ ಗೊತ್ತಿಲ್ಲ. ಆ ಮೊಬೈಲ್ ನ ರಶೀದಿ ಇಲ್ಲದ ಕಾರಣ ಅದನ್ನು ಪೊಲೀಸರಿಗೆ ಕೊಟ್ಟಿಲ್ಲ.

ಮೊಬೈಲ್ ನಲ್ಲಿ ಇತ್ತು ಎಂದು ಹೇಳಲಾದ ಮೆಮೋರಿ ಕಾರ್ಡ್ ಎಷ್ಟು ಜಿ.ಬಿ., ಸಾಮರ್ಥ್ಯದ್ದು ಎಂದು ನನಗೆ ಗೊತ್ತಿಲ್ಲ. ನಿಪಿ-3(ಎ) ಸಹಿಯನ್ನು ನಾನು ಬಣಕಲ್ ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ಮು.ಮಾ.1 ನನಗೆ ಸಂಬಂಧಿಸಿದ್ದರೆ ಅದನ್ನು ಬಿಡುಗಡೆ ಮಾಡಿಸಿಕೊಳ್ಳುತ್ತಿದ್ದಿರಿ ಅಂದರೆ ಸಾಕ್ಷಿಯು ಮೊಬೈಲ್ ಪುಡಿಯಾಗಿದ್ದ ಕಾರಣ ಬೇಡ ಎಂದು ಬಿಡುಗಡೆ ಮಾಡಿಸಿಕೊಂಡಿಲ್ಲ ಎಂಬುದಾಗಿ ನುಡಿಯುತ್ತಾರೆ. ಆ ಮೊಬೈಲ್ ನಲ್ಲಿ ಜಿಯೋ ಕಂಪೆನಿಯ ಸಿಮ್ ಕಾರ್ಡ್ ಇತ್ತು. ಸದರಿ ಮೊಬೈಲ್ ನ ಐ.ಎಂ.ಐ., ನಂಬರನ್ನು ನನ್ನಿಂದ ಹೇಳಲಾಗುವುದಿಲ್ಲ. ನನ್ನ ಮೊಬೈಲ್ ಕಪ್ಪು ಬಣ್ಣದ್ದಾಗಿತ್ತು. ಮು.ಮಾ. 1 ರ ಮೊಬೈಲ್ ನನ್ನದಲ್ಲ ಅಂದರೆ ಸರಿಯಲ್ಲ. ಮು.ಮಾ.1 ಉಪಯೋಗಿಸಲು ಯೋಗ್ಯವಾಗಿರುತ್ತದೆ ಅಂದರೆ ಸರಿಯಲ್ಲ. ಮು.ಮಾ. 1 ರಲ್ಲಿ ಒಂದೇ ಸಿಮ್ಮನ್ನು ಬಳಸುತ್ತಿದ್ದೆ. ಸದರಿ ಮೊಬೈಲ್ ಗೆ ಎಷ್ಟು ಸಿಮ್ಮ ಹಾಕಬಹುದಿತ್ತು ಎಂದು ನನಗೆ ಗೊತ್ತಿಲ್ಲ. ಮು.ಮಾ.1 ಕ್ಕು ನನಗು ಸಂಬಂಧ ಇಲ್ಲ ಅಂದರೆ ಸರಿಯಲ್ಲ.

**<u>ಮರುವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-xxx

ಸಾಕ್ಷಿ ಸಹಿ: ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.